**<u>ದಿ:23.06.2026 ರಂದು ಮದ್ಯಂತರ ಅರ್ಜಿ ಆದೇಶದ ಮೇರೆಗೆ ಸಾಕ್ಷಿಗೆ ಪುನಃ ಕರೆಯಿಸಲಾಯಿತು. ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲು:-</u>**ಪ್ರತಿವಾದಿ ಪರ ಶ್ರೀ. **H.S.V.,** ವಕೀಲರಿಂದ:-

ದಾವಾ ಸ್ವತ್ತು ನಮ್ಮ ತಾಯಿ ಕೆಂಚಮ್ಮ ಕಡೆಯಿಂದ ಬಂದಿರುತ್ತದೆ . ನಿಪಿ 30 ಪಾಲು ವಿಭಾಗದ ಬಗ್ಗೆ ಮಾಹಿತಿ ತಿಳಿದುಕೊಂಡಿರುತ್ತೇನೆ . ನಿಪಿ 30 ಪಾಲುವಿಭಾಗ ಪತ್ರದ ಪ್ರಕಾರ ನನ್ನ ತಾಯಿ ಕೆಂಚಮ್ಮ ಅವರಿಗೆ ಬಿಳಿಚೋಡು ಗ್ರಾಮದ ಸರ್ವೆ ನಂಬರ್ 80/1 ರಲ್ಲಿ 3 ಎಕರೆ 20 ಗುಂಟೆ ಬಂದಿರುವ ಬಗ್ಗೆ ನಮೂದು ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಚೆಕ್ ಬಂದಿ ಪೂರ್ವಕ್ಕೆ: ಕುಮಾರ ಬಸವರಾಜ್ ರವರ ಜಮೀನು , ಪಶ್ಚಿಮಕ್ಕೆ: ಗೋಮಾಳ , ಉತ್ತರಕ್ಕೆ: ದಾವಣಗೆರೆ ಜಗಳೂರು ರಸ್ತೆ ಮತ್ತು ದಕ್ಷಿಣಕ್ಕೆ: ದ್ಯಾಮಮ್ಮನ ದೇವಸ್ಥಾನಕ್ಕೆ ಸಂಬಂದ ಪಟ್ಟ ಹೋಲ ಇರುತ್ತದೆ . ನಿಪಿ 30 ರಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ಪಾರ್ವತಮ್ಮ ಹಿಸ್ಸೆಗೆ ಸೇರಿದ ಜಮೀನು ಇರುತ್ತದೆ ಎಂದರೆ ಸಾಕ್ಷಿ ಸದರಿ ಪಾರ್ವತಮ್ಮ ಅವರಿಂದ ಖರೀದಿ ಮಾಡಿರುತ್ತೇವೆ ಎಂದು ಹೇಳುತ್ತಾರೆ . ನಿಪಿ 30 ರಲ್ಲಿ ಪಶ್ಚಿಮಕ್ಕೆ ರಸ್ತೆ ಎಂದು ನಮೂದು ಇರುತ್ತದೆ ಎಂದರೆ ಸಾಕ್ಷಿ ಉತ್ತರಕ್ಕೆ ರಸ್ತೆ ಇರುತ್ತದೆ ಎಂದು ಹೇಳುತ್ತಾರೆ . ನಿಪಿ 30 ರಲ್ಲಿ ಉತ್ತರಕ್ಕೆ ದಾವಣಗೆರೆ ಜಗಳೂರು ರಸ್ತೆ ಇರುತ್ತದೆ ಎಂದರೆ ಸರಿ. ದಕ್ಷಿಣಕ್ಕೆ ಸರ್ಕಾರಿ ಸ್ವತ್ತು ಇರುತ್ತದೆ ಎಂದರೆ ಸಾಕ್ಷಿ ದೇವರ ಜಮೀನು ಇರುತ್ತದೆ ಎಂದು ಹೇಳುತ್ತಾರೆ . ನಿಪಿ 30 ದಾಖಲೆಯಲ್ಲಿ ನಮ್ಮ ತಾಯಿಗೆ ಬಂದಿರುವ ಜಮೀನನ್ನು ಬಿಟ್ಟು ಅದರ ಪಶ್ಚಿಮ ದಿಕ್ಕಿಗೆ ನಾವು ಯಾವುದೇ ಜಮೀನನ್ನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿ. ನಮ್ಮ ತಾಯಿಗೆ ಕೇವಲ 3 ಎಕರೆ 20 ಗುಂಟೆ ಮಾತ್ರ ಬಂದಿದ್ದರು, ನಾನು 4 ಎಕರೆ 10 ಗುಂಟೆ ಎಂದು ಪಹಣಿಗಳನ್ನು ಸೃಷ್ಠಿ ಮಾಡಿರುತ್ತೇವೆ ಎಂದು ಹೇಳುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರವರು ಯಾವ ಆಧಾರದ ಮೇಲೆ ಮನೆ ಕಟ್ಟಿರುವ ಬಗ್ಗೆ ತಿಳಿದುಕೊಂಡಿರುತ್ತೀರ ಎಂದರೆ ಸಾಕ್ಷಿ ಯಾವುದೇ ಆಧಾರ ಇಲ್ಲದೇ ಕಟ್ಟಿರುತ್ತಾರೆ ಎಂದು ಹೇಳುತ್ತಾರೆ . ನಾನು ತಹಶೀಲ್ದಾರರು ಅವರಿಗೆ ಪ್ರತಿವಾದಿ ವಿರುದ್ದ ಅರ್ಜಿ ನೀಡಿದಾಗ ಪ್ರತಿವಾದಿಗಳು ಯಾವ ದಾಖಲೆ ಆಧಾರದ ಮೇಲೆ ಮನೆ ಕಟ್ಟಿರುವ ಬಗ್ಗೆ ನನಗೆ

ಗೋತ್ತಿರುವುದಿಲ್ಲ . ಪ್ರತಿವಾದಿ 1 ರವರ ಮನೆಯ ದಕ್ಷಿಣ ದಿಕ್ಕಿಗೆ ಮುಗ್ಗಿದರಾಗೇಹಳ್ಳಿ ಗ್ರಾಮ ಇರುತ್ತದೆ . ದಾವಣಗೆರೆ ಜಗಳೂರು ಮುಖ್ಯ ರಸ್ತೆಯಿಂದ ಮುಗ್ಗಿದರಾಗೇಹಳ್ಳಿ ರಸ್ತೆಯು ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆಸಿ ನಮ್ಮ ಜಮೀನಿನಲ್ಲಿ ಹಾದು ಹೋಗಿರುತ್ತದೆ ಎಂದು ಹೇಳುತ್ತಾರೆ . ಸದರಿ ಮುಗ್ಗಿದರಾಗೇಹಳ್ಳಿ ರಸ್ತೇವರೆಗೂ ಮಾತ್ರ ನನಗೆ ಸೇರಿದ ಜಮೀನು ಇರುತ್ತದೆ , ಅದರ ನಂತರ ನನಗೆ ಸೇರಿದ ಜಮೀನು ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 9 ದಾಖಲೆಯು ನಾನು ಗ್ರಾಮಠಾಣದವರು ಒತ್ತುವರಿ ಮಾಡಿದ ಬಗ್ಗೆ ಅರ್ಜಿ ನೀಡಿರುವುದಾಗಿ ನಮೂದು ಇರುತ್ತದೆ ಎಂದರೆ ಸರಿಯಲ್ಲ. ನಿಸಿ 8 ನಕಾಶೆಯು ನ್ಯಾಯಾಲಯದಿಂದ ಸರ್ವೆ ಮಾಡಿಸಿದಾಗ ದಾಖಲೆ ಇರುತ್ತದೆ ಎಂದರೆ ಸರಿ. ನಿಸಿ 8 ನಕಾಶೆಯಂತೆ ಮುಗ್ಗಿದರಾಗೇಹಳ್ಳಿ ರಸ್ತೆಯಿಂದ ಕೆರೆಗೆ ಎಂಬ ರಸ್ತೆ ತೋರಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿಗಳು ಒತ್ತುವರಿ ಮಾಡಿರುತ್ತಾರೆ ಎಂದು ನಾನು ಹೇಳಿರುವುದು ಸದರಿ ರಸ್ತೆಯಿಂದ ಮೂಲೆಗೆ ಬ್ಲಾಕ್ 1, 2, 3 ಎಂದು ನಮೂದು ಇರುತ್ತದೆ ಎಂದರೆ ಸರಿ . ನಿಸಿ 8 ನಕಾಶೆಯಲ್ಲಿ ತೋರಿಸಿರುವ ಒತ್ತುವರಿ ಜಾಗವು ನಮ್ಮ ತಾಯಿಗೆ ನಿಪಿ 30 ರಂತೆ ಬಂದಿರುವ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಬಂದಿರುವ ಆಸ್ತಿ 3 ಎಕರೆ 20 ಗುಂಟೆ ಆಸ್ತಿಯು ಸದರಿ ಮುಗ್ಗಿದರಾಗೇಹಳ್ಳಿಯಿಂದ ಕೆರೆಗೆ ಹೋಗುವ ರಸ್ತೆವರೆಗೂ ಮಾತ್ರ ಇರುತ್ತದೆ ಹೊರತು ಸದರಿ ರಸ್ತೆ ನಂತರ ಇರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ಕೇವಲ 3 ಎಕರೆ 20 ಗುಂಟೆ ಮಾತ್ರ ಬಂದಿರುತ್ತದೆ 4 ಎಕರೆ 10 ಗುಂಟೆ ಬಂದಿರುವುದಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇರುವುದಿಲ್ಲ.

**(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು**.)**

ಓ ಹೇ ಕೇ ಸರಿ ಇದೆ

Sd/-

ಸಿವಿಲ್ ನ್ಯಾಯಾಧೀಶರು**,** ಜಗಳೂರು